## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 354/2021**

| | ಚಾಸಾಃ 24 | ಅಸಾಃ 15 |
|---|---|---|
| ಹೆಸರು | ಪುಟ್ಟಸ್ವಾಮಿಗೌಡ | |
| ತಂದೆಯ ಹೆಸರು : | ರುದ್ರೇಗೌಡ | |
| ವಯಸ್ಸು: | 61 ವರ್ಷ | |
| ಕೆಲಸಃ | ನಿವೃತ್ತ ಪೊಲೀಸ್ ಉಪಾಧೀಕ್ಷಕರು | |
| ವಾಸಸ್ಥಳ | ಕೆಂಗೇರಿ, ಬೆಂಗಳೂರು | |

ದಿನಾಂಕಃ **03/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ದಿ. 07.10.2018 ರಿಂದ 30.10.2021 ರವರೆಗೆ ಹಾಸನ ಉಪ ವಿಭಾಗದಲ್ಲಿ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 10.06.2021 ರಂದು ಚಾಸಾ-23 ರವರಿಂದ ಪಡೆದು ಪರಿಶೀಲಿಸಿರುತ್ತೇನೆ.

2. ಅದೇ ದಿನ ಕೃತ್ಯ ಸ್ಥಳ ಬಿದರೆಕೆರೆ ಗ್ರಾಮದಲ್ಲಿರುವ ಹಾಲಿನ ಡೈರಿಯ ಪಕ್ಕ ಪಶುವೈದ್ಯಕೀಯ ಜಾಗದಲ್ಲಿ ಪಂಚರಾದ ಚಾಸಾ-12 ಮತ್ತು ಪ್ರಾಸಾ-5 ರವರ ಸಮಕ್ಷಮ ಚಾಸಾ-3 ರವರು ಸ್ಥಳ ತೋರಿಸಿದ ಮೇರೆಗೆ ಸಂಜೆ 5.45-6.45 ರವರೆಗೆ ನಿಪಿ-2 ರಂತೆ ಮಹಜರ್ ಮಾಡಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಪಿರ್ಯಾದಿದಾರರು ಹಾಜರುಪಡಿಸಿದ 5 ವಸ್ತುಗಳನ್ನು, 1. 2 ಮರದ ರಿಪೀಸ್ ಪಟ್ಟಿ, 2. ಒಂದು ಮರದ ದೊಣ್ಣೆ, 3. ಒಂದು ಬಿದಿರಿನ ದೊಣ್ಣೆ, 4. ಪ್ಲಾಸ್ಟಿಕ್ ಹಗ್ಗ, 5. ಒಂದು ಶರ್ಟನ್ನು ಅಮಾನತುಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 108/2021 ಕ್ಕೆ ಅಳವಡಿಸಿರುತ್ತೇನೆ, ಮಹಜರ್ ಸಮಯದಲ್ಲಿ ನಿಪಿ-3 ರಂತೆ ಪೊಟೋ ತೆಗೆದಿರುತ್ತೇನೆ. ಸಾಕ್ಷಿ ನಿಪಿ-3 ನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಸಿಡಿಯನ್ನು ಗುರುತು ಮಾಡಲು ಮಾನ್ಯ ಸ.ಅ. ರವರು ಮನವಿ ಮಾಡಿದ್ದು, ಸಿಡಿಯನ್ನು ಹಾಕಿನೋಡಿದಾಗ, ಅದರಲ್ಲಿ ವಿಡಿಯೋ ದೃಶ್ಯಾವಳಿಯಲ್ಲಿ ಮಹಜರ್ ಸಾಕ್ಷಿದಾರರು ಇರುವುದು ಕಂಡು ಬಂದಿದ್ದು, ಸಿಡಿಯನ್ನು ನಿಪಿ-12 ಎಂದು ಗುರುತಿಸಲಾಯಿತು.

ಕಲಂ 65(ಬಿ) ಪ್ರಮಾಣ ಪತ್ರವನ್ನು ಗುರುತಿಸಲು ಆರೋಪಿ ವಕೀಲರು ತಕರಾರು ಮಾಡಿರುತ್ತಾರೆ, ಪ್ರಮಾಣ ಪತ್ರವನ್ನು ನೋಡಲಾಗಿ ಅದನ್ನು ವಿಡಿಯೋ ಮಾಡಿದವರು ಕೊಡದ ಕಾರಣ ಪ್ರಮಾಣ ಪತ್ರವನ್ನು ಗುರುತಿಸು ಮನವಿಯನ್ನು ತಿರಸ್ಕರಿಸಲಾಯಿತು.

ಅದೇ ಆರೋಪಿ 1 2 4 ಮತ್ತು 5 ರವರನ್ನು ಚಾಸಾ-23 ರವರು ನನ್ನ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತಾರೆ, ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ವರದಿಜನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು, ಸಾಕ್ಷಿ ನಿಪಿ-13 ರಲ್ಲಿ ಚಾಸಾ-23 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅವರ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಅವರ ಮೇಲೆ ದಸ್ತಗಿರಿ ಕ್ರಮ ಕೈಗೊಂಡು ಸ್ವ ಇಚ್ಚಾ ಹೇಳಿಕೆಯನ್ನು ಪಡೆದು, ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಚಾಸಾ-1, 3 5, 17 ರಿಂದ 19 ರವರ ಹೇಳಿಕೆ ಪಡೆದಿರುತ್ತೇನೆ. ದಿ. 12.06.2021 ರಂದು ಚಾಸಾ-7, 2, 4, 8, 9 ರವರ ಹೇಳಿಕೆ ಪಡೆದಿರುತ್ತೇನೆ. ದಿ. 05.08.2021 ರಂದು ಚಾಸಾ-1 ರಿಂದ 10 ಹಾಗೂ 1 ರಿದ 5ನೇ ಅರೋಪಿತರ ಜಾತಿ ಪ್ರಮಾಣ ಪತ್ರವನ್ನು ನಿಪಿ-4 ರಂತೆ ಪಡೆದಿರುತ್ತೇನೆ. ನಂತರ ನಿಪಿ-5 ರಿಂದ 11 ಗಾಯದ ಪ್ರಮಾಣ ಪತ್ರವನ್ನು ವೈದ್ಯಾಧಿಕಾರಿಯವರಿಂದ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನನ್ನು ನಿಪಿ-5(ಬಿ) ರಿಂದ 11(ಬಿ) ಎಂದು ಗುರುತಿಸಲಾಯಿತು.

ದಿ. 08.08.2021 ರಂದು ಡಬ್ಲ್ಯೂಡಿ ರವರಿಂದ ನಕಾಶೆಯನ್ನು ಪಡೆದಿರುತ್ತೇನೆ. ಸಾಕ್ಷಿ ಪತ್ರ ಹಾಗೂ ನಕಾಶೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-14 ಮುತ್ತ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಮತ್ತು ನಿಪಿ-15(ಎ) ಎಂದು ಗುರುತಿಸಲಾಯಿತು, ನಿಪಿ-7 ರಂತೆ ಪಡೆದಿರುತ್ತೇನೆ. 3ನೇ ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು, ಅವರ ಮೇಲೆ

ದಸ್ತಗಿರಿ ಕ್ರಮಕೈಗೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ವಿ ಜಿ ವಕೀಲರಿಂದಃ

ಚಾಸಾ-1 ರವರ ಹೇಳಿಕೆಯ ದೂರಿನಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಚಾಸಾ-3 ರವರ ತಂದೆಯ ಹೆಸರು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ಅದು ನನ್ನ ಕೈಬರಹವಲ್ಲ ಎಂದರೆ ಸರಿ. ಮುಮಾ-1 ರಿಂದ 6 ರಲ್ಲಿ ಕ್ರೈಂ ನಂಬರ್, ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿ. ಮುಮಾ-1 ರಿಂದ 6 ಸಾಮಾನ್ಯವಾಗಿ ಹಳ್ಳಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಮುಮಾ-1 ರಿಂದ 6 ನ್ನು ಕೃತ್ಯಕ್ಕೆ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುಗಳು ಅಪಘಾತದಿಂದ ಗಾಯಮಾಡಿಕೊಂಡಿರುವುದು ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮರೆಮಾಚಿ ಅವರಿಗೆ ಈ ರೀತಿ ಗಾಯವಾಗಿದೆ ಎಂದು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಾಗೆ ಯಾರು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1, 2, 4 ಮತ್ತು 5 ರವರು ಈ ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಗೆ ಅನುಕೂಲವಾಗುವಾಗೇ ಜಾತಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಯಾವುದೇ ಕೇಸು ಸಾಬೀತಾಗದೇ ಇದ್ದರೂ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ